Fax: 08282-256262
E-mail:kuvempuacademic@gmail.com

Phone No. 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ. ಕಾರ್ಯಾಲಯ., ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.& 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

## ಕಛೇರಿ ಆದೇಶ

ವಿಷಯ: ವಿಶ್ವವಿದ್ಯಾಲಯದ 2024–25ನೇ ಸಾಲಿನ ಪಿಹೆಚ್.ಡಿ. ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆ ನಡೆಸುವ ಬಗ್ಗೆ.

ಉಲ್ಲೇಖ: 1. ದಿನಾಂಕ: 02–09–2025ರಂದು ನಡೆದ ಡೀನರುಗಳ ಸಭೆಯ ನಿರ್ಣಯ.
2. ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: ಕುವಿ:ಶೈವಿ:ಪಿಹೆಚ್.ಡಿ–1:2209:2025–26. ದಿನಾಂಕ:10–09–2025.
3. ವಿಶ್ವವಿದ್ಯಾಲಯ ಕಛೇರಿ ಆದೇಶ ಸಂಖ್ಯೆ: ಕುವಿ:ಪವಿ:ಪಿಹೆಚ್.ಡಿ–1:3832:2025–26. ದಿನಾಂಕ: 23–09–2025.
4. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:29–09–2025.

*****

**ಪ್ರಸ್ತಾವನೆ:**

ವಿಶ್ವವಿದ್ಯಾಲಯದ 2024–25ನೇ ಸಾಲಿನ ಪಿಹೆಚ್.ಡಿ. ಪ್ರವೇಶಾತಿಗಾಗಿ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು, ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವು ಮುಕ್ತಾಯವಾಗಿರುತ್ತದೆ. ಈ ಸಂಬಂಧ ಮುಂದಿನ ಪ್ರಕ್ರಿಯೆಗಳನ್ನು ನಡೆಸುವ ಬಗ್ಗೆ ಉಲ್ಲೇಖ(1)ರ ಡೀನರ ಸಭೆಯಲ್ಲಿ ಚರ್ಚಿಸಲಾಗಿದೆ. ಸದರಿ ಸಭೆಯ ನಿರ್ಣಯದ ಪ್ರಕಾರ ಉಲ್ಲೇಖ(2)ರಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ. ಈ ಮಧ್ಯೆ ಉಲ್ಲೇಖ(3)ರಲ್ಲಿ ಪರೀಕ್ಷಾಂಗ ವಿಭಾಗದಿಂದ ಹೊರಡಿಸಿರುವ ಆದೇಶದಲ್ಲಿ ಪಿಹೆಚ್.ಡಿ. ಪದವಿಯ ಎಲ್ಲಾ ವಿಭಾಗಗಳ ಪ್ರವೇಶಾತಿ ಪರೀಕ್ಷೆಗಳನ್ನು ಕೇಂದ್ರೀಕರಣಗೊಳಿಸಿ, ಪರೀಕ್ಷಾ ವಿಭಾಗದಿಂದ ಪರೀಕ್ಷೆಗಳನ್ನು ನಡೆಸಲಾಗುವುದೆಂದು ತಿಳಿಸಲಾಗಿದೆ. ಆದರೆ ಉಲ್ಲೇಖ(1)ರ ಡೀನರುಗಳ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿದ್ದು, ಪ್ರವೇಶ ಪರೀಕ್ಷೆಗಳನ್ನು ಕೇಂದ್ರೀಕರಣಗೊಳಿಸಲು ಪಿಹೆಚ್.ಡಿ ವಿನಿಯಮ 2017ರಲ್ಲಿ ಅವಕಾಶವಿಲ್ಲದಿರುವುದನ್ನು ಗಮನಿಸಿ, 2024–25ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪರೀಕ್ಷೆಯನ್ನೂ ಒಳಗೊಂಡಂತೆ ಎಲ್ಲಾ ಪ್ರಕ್ರಿಯೆಗಳನ್ನು ಪಿಹೆಚ್.ಡಿ ವಿನಿಯಮ 2017ರ ಅನ್ವಯವೇ ನಡೆಸಬೇಕೆಂದು ನಿರ್ಣಯಿಸಲಾಗಿದೆ. ಉಲ್ಲೇಖ(3)ರ ಕಛೇರಿ ಆದೇಶ ಹಾಗೂ ಉಲ್ಲೇಖ(1)ರ ಡೀನರುಗಳ ಸಭೆಯ ನಡಾವಳಿಗಳನ್ನು ಪರಿಗಣಿಸಿ ಉಲ್ಲೇಖ(4)ರಲ್ಲಿ ಮಾನ್ಯ ಕುಲಪತಿಗಳು 2024–25ನೇ ಸಾಲಿನ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳನ್ನು 2017ರ ವಿನಿಯಮದನ್ವಯವೇ ನಡೆಸಲು ಆದೇಶಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕುವಿ:ಶೈವಿ:ಪಿಹೆಚ್.ಡಿ–1:2473:2025–26, ದಿನಾಂಕ: 30–09–2025**
03–10

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ(1)ರ ಡೀನರುಗಳ ಸಭೆಯ ನಿರ್ಣಯ ಹಾಗೂ ಉಲ್ಲೇಖ(4)ರ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಉಲ್ಲೇಖ(3)ರ ಕಛೇರಿ ಆದೇಶದಲ್ಲಿ ತಿಳಿಸಿರುವಂತೆ 2024–25ನೇ ಸಾಲಿನ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳನ್ನು ಕೇಂದ್ರೀಕರಣದ ವ್ಯವಸ್ಥೆಯ ಮೂಲಕ ನಡೆಸುವ ಬದಲು **ಪಿಹೆಚ್.ಡಿ. ವಿನಿಯಮ 2017ರ ಪ್ರಕರಣ 8ರನ್ವಯ, ವಿಭಾಗದ ಮಟ್ಟದಲ್ಲಿಯೇ ನಡೆಸಲು ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.**

ಉಲ್ಲೇಖ(2)ರಲ್ಲಿ ಈಗಾಗಲೇ ಅಧಿಸೂಚಿಸಿರುವ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಪಿಹೆಚ್.ಡಿ. ಪ್ರವೇಶ ಪರೀಕ್ಷೆ ನಡೆಸಲು ದಿನಾಂಕ:30–09–2025ರಂದು ಕೊನೆಯ ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ ಉಲ್ಲೇಖ (3)ರ ಕಛೇರಿ ಆದೇಶದಿಂದಾಗಿ ಉಂಟಾಗಿರುವ ಗೊಂದಲದಿಂದ ಕೆಲವು ವಿಭಾಗಗಳು ಪ್ರವೇಶ ಪರೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ಪ್ರವೇಶ ಪರೀಕ್ಷೆಯನ್ನು ನಡೆಸದಿರುವ ವಿಭಾಗಗಳು **ದಿನಾಂಕ:15-10-2025 ರೊಳಗಾಗಿ** ಪ್ರವೇಶ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಹಾಗೂ ಮಾರ್ಗದರ್ಶಕರ ಹಂಚಿಕೆಗೆ ಕ್ರಮ ಕೈಗೊಳ್ಳಲು ಅವಕಾಶ ನೀಡಲಾಗಿದೆ. ಉಳಿದಂತೆ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

3/10/25
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ–577 451.
ಶಿವಮೊಗ್ಗ ಜಿಲ್ಲೆ

ಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರು/ಸಂಯೋಜನಾಧಿಕಾರಿಗಳು.
2. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ /ಶಿವಮೊಗ್ಗ /ಕಡೂರು/ಚಿಕ್ಕಮಗಳೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕಡೂರ
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಚಿಕ್ಕಮಗಳೂರು.

30/9/2025

--2

5. ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.
6. ಪ್ರಾಂಶುಪಾಲರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
7. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.
8. ಪ್ರಾಂಶುಪಾಲರು, ಎಸ್.ಎಂ.ಆರ್. ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ.

<u>ಪ್ರತಿಗಳು</u>

1. ಆಪ್ತ ಸಹಾಯಕರು: ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪರೀಕ್ಷಾಂಗ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಎಲ್ಲಾ ನಿಕಾಯಗಳ ಡೀನರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಡೀನರು, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ನೋಡಲ್ ಅಧಿಕಾರಿಗಳು, ಯು.ಯು.ಸಿ.ಎಂ.ಎಸ್., ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಎಲ್ಲಾ ಶಾಲಾ ನಿರ್ದೇಶಕರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಉಪಕುಲಸಚಿವರು, ಅಭಿವೃದ್ಧಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8. ಸಂಚಾಲಕರು, ಪಜಾ:ಪಪಂ:ಒ.ಬಿ.ಸಿ. ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ರಕ್ಷಣಾ ಕಡತ.
10. ಕಛೇರಿ ಪ್ರತಿ.